# ಚಿಟ್ಟೆಗಳ ಮಡ್ಪಡ್ಲಿಂಗ್

ಪ್ರಕೃತಿಯ ಆಭರಣಗಳಂತಿರುವ ಬಣ್ಣಬಣ್ಣದ ಚಿಟ್ಟೆಗಳನ್ನು ವೀಕ್ಷಿಸುವುದು, ಅವುಗಳ ಛಾಯಾಚಿತ್ರ ತೆಗೆಯುವುದು, ಅವುಗಳ ಬಗ್ಗೆ ಅಧ್ಯಯನ ಮಾಡುವುದು ಬಹಳ ಉಲ್ಲಾಸದಾಯಕ! ಹೀಗೆ ಚಿಟ್ಟೆಗಳ ವೀಕ್ಷಣೆ ಮಾಡುತ್ತಾ ಹೋದಂತೆ, ನಮಗೆ ಅವುಗಳ ಸ್ವಾರಸ್ಯವಾದ ಚಟುವಟಿಕೆಗಳು ಕಂಡುಬಂದು ಕುತೂಹಲ ಮೂಡಿಸುತ್ತವೆ! ಅಂಥ ಚಟುವಟಿಕೆಗಳಲ್ಲಿ ಮಡ್ಪಡ್ಲಿಂಗ್ ಕೂಡ ಒಂದು.

ಹೆಣ್ಣು ಚಿಟ್ಟೆಗಳು ಮೊಟ್ಟೆಯಿಡುವಾಗ, ಮೊಟ್ಟೆಗಳ ಮೇಲ್ಪದರಕ್ಕಾಗಿ ಲವಣಾಂಶಗಳೂ ಪೋಷಕಾಂಶಗಳೂ ಅಗತ್ಯವಿರುತ್ತವೆ. ಹಾಗಾಗಿ ಗಂಡುಚಿಟ್ಟೆಗಳು ಗುಂಪಾಗಿ ನದಿ, ಕೆರೆಗಳ ತೀರದ ಮಣ್ಣಿನ ಮೇಲೆ ಕುಳಿತು ಅದರಿಂದ ಲವಣಾಂಶಗಳನ್ನೂ ಪೋಷಕಾಂಶಗಳನ್ನೂ ಹೀರಿಕೊಳ್ಳುತ್ತವೆ! ಇದೇ ಮಡ್ಪಡ್ಲಿಂಗ್. ಅನಂತರ ಇವನ್ನು ಅವು ಸಂಭೋಗದ ಸಮಯದಲ್ಲಿ ಹೆಣ್ಣುಚಿಟ್ಟೆಗಳಿಗೆ ಪುಟ್ಟ ಮಾತ್ರೆಗಳ ರೂಪದಲ್ಲಿ ವರ್ಗಾಯಿಸುತ್ತವೆ! ಜೊತೆಗೆ ಈ ಅಂಶಗಳು ಲೈಂಗಿಕ ಹಾರ್ಮೋನುಗಳ ವೃದ್ಧಿಗೂ ಬೇಕಾಗುತ್ತವೆ. ಸಾಮಾನ್ಯವಾಗಿ ಮಡ್ಪಡ್ಲಿಂಗ್ ಕ್ರಿಯೆಯಲ್ಲಿ ಗಂಡು ಚಿಟ್ಟೆಗಳೇ ಇದ್ದರೂ ಹೆಣ್ಣುಚಿಟ್ಟೆಗಳೂ ಕೆಲವೊಮ್ಮೆ ನೀರು ಕುಡಿಯಲು ಜೊತೆಗೆ ಬರುತ್ತವೆ. ಅಂದಹಾಗೆ, ಚಿಟ್ಟೆಗಳ ಈ ಮಡ್ಪಡ್ಲಿಂಗ್ ದೃಶ್ಯ ನೋಡಲು, ಕ್ಲಿಕ್ಕಿಸಲು ಸಿಕ್ಕಿದ್ದು ಕನಕಪುರ ರಸ್ತೆಯ ಬಳಿಯಿರುವ ಭೀಮೇಶ್ವರಿ ಕಾಡಿನ ಕಾವೇರಿ ನದಿಯ ದಡದಲ್ಲಿ!

**-ಡಾ.ಬಿ.ಆರ್.ಸುಹಾಸ್, ಬೆಂಗಳೂರು**





# ಗಂಟೆ ದಾಸವಾಳ

ಇದು ಗಂಟೆ ದಾಸವಾಳ. ಇದೊಂದು ವಿಶಿಷ್ಟ ರೀತಿಯ ದಾಸವಾಳ. ರಚನೆಯಲ್ಲಿ ದೇವಸ್ಥಾನದ ಗಂಟೆಯನ್ನು ಹೋಲುವುದರಿಂದ ಈ ಹೆಸರು ಬಂದಿದೆ. ಇದರಲ್ಲಿ ಕೆಂಪು, ಬಿಳಿ, ಹಳದಿ... ಹೀಗೆ ಹಲವಾರು ಬಣ್ಣಗಳಿವೆ. ಹೂವು ಐದು ಅಥವಾ ಆರು ಎಸಳುಗಳಿಂದ ಕೂಡಿ ಗಿಡದ ತುಂಬ ಅರಳುತ್ತವೆ. ಗೆಲ್ಲು ನೆಟ್ಟು ಸಸ್ಯಾಭಿವೃದ್ಧಿ ಮಾಡಬಹುದು. ಅಲಂಕಾರಕ್ಕೆ, ದೇವರ ಪೂಜೆಗೆ ಮಾತ್ರವಲ್ಲ ಹೆಂಗಳೆಯರ ಮುಡಿಗೂ ಸಲ್ಲುವ ಗಂಟೆ ದಾಸವಾಳ ನಿಮ್ಮ ಮನೆಯಂಗಳದಲ್ಲೂ ಇರಲಿ.

**-ಸಹನಾ ಕಾಂತಬೈಲು, ಮಡಿಕೇರಿ**

# ಶತಮಾನ ಕಂಡ ಸಂಬಾರು ಬಟ್ಟಲು

ಪಾರಂಪರಿಕ ಸಾಮಗ್ರಿಗಳ ಸಾಲಿಗೆ ಸೇರುವ ಈ ಮರದ ಸಂಬಾರು ಬಟ್ಟಲು ಸುಮಾರು 100 ವರ್ಷಕ್ಕಿಂತಲೂ ಹೆಚ್ಚು ಹಳೆಯದು. ಹೊಸನಗರದ ದೊರೆಮನೆ ಎಂಬಲ್ಲಿ ನನ್ನ ಅಜ್ಜಿಯ ಮನೆಯಲ್ಲಿದೆ. ಒಂದೇ ಮರದ ತುಂಡಿನಿಂದ ಕಲಾತ್ಮಕವಾಗಿ, ಅಚ್ಚುಕಟ್ಟಾಗಿ ವಿನ್ಯಾಸ ಮಾಡಲಾಗಿರುವ ಈ ಮರದ ಬಟ್ಟಲು ನೋಡಲು ಸುಂದರವಾಗಿ, ಇಂದಿಗೂ ಗಟ್ಟಿಮುಟ್ಟಾಗಿ ಇದೆ. ಆಧುನಿಕತೆಯ ನೆಪದಲ್ಲಿ ನೇಪಥ್ಯಕ್ಕೆ ಸರಿದಿರುವ ಈ ಮರದ ಸಂಬಾರು ಬಟ್ಟಲು ಆಹಾರ ಪದಾರ್ಥಗಳನ್ನು ಸಂರಕ್ಷಿಸಿಟ್ಟುಕೊಳ್ಳುವಲ್ಲಿಯೂ ಬಹಳ ಸಹಕಾರಿ. ಕೈಗೆ ನಿಲುಕುವಂತೆ, ಎಲ್ಲವೂ ಒಂದೇ ಕಡೆ ಸಿಗುವಂತೆ, ನಿತ್ಯದ ಅಡುಗೆಗೆ ಬೇಕಾಗುವ ಸಾಸಿವೆ, ಜೀರಿಗೆ, ಕೊತ್ತಂಬರಿ, ಅರಿಶಿಣ, ಒಣಮೆಣಸಿನಂತಹ ಸಂಬಾರು ಪದಾರ್ಥಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಹಿಂದಿನವರು ಬಳಸುತ್ತಿದ್ದರು.

**-ಗೀತಾ ಹೆಗಡೆ, ಬೆಂಗಳೂರು**

